**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.


## ಚಿಂತನ

ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ
ಮುಗ್ಸಲ್ ಕನ್ನಡ್ ಪದವಾಡ್ತಿನಿ!

ಎಂದು ಕನ್ನಡದ ಖ್ಯಾತ ಕವಿ ಜಿ.ಪಿ. ರಾಜರತ್ನಂ ಅವರು ದೇವರು ಎದುರು ಬಂದಾಗಲೂ ಗಟ್ಟಿ ಧ್ವನಿಯಲ್ಲಿ ಕನ್ನಡ ಮಾತಾನಾಡುವೆನೆಂದು ಹೇಳಿ ಕನ್ನಡಾಭಿಮಾನ ತೋರಿದ್ದಾರೆ.

ಪ್ರಕೃತ ಬೆಂಗಳೂರಿನಲ್ಲಿ ಕನ್ನಡದ ಮಾತೇ ಅಪರೂಪ. ನಗರದ ಶೇ.35 ಜನ ಮಾತ್ರ ಕನ್ನಡಿಗರು. ಎಲ್ಲ ಸರಕಾರಿ ಉದ್ಯೋಗದಲ್ಲಿ ಕನ್ನಡಿಗರಿಗೆ ಸೂಕ್ತ ಸ್ಥಾನಮಾನವಿಲ್ಲ. ಈ ವಿವರಗಳ ಬಗ್ಗೆ ಆಗಾಗ ಕನ್ನಡಪರ ಚಳುವಳಿಗಾರರು ಪ್ರಸ್ತಾವನೆ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದ ವಿಚಾರ.

ಕೇಂದ್ರ ಸರಕಾರದ ತಾರತಮ್ಯ ಪ್ರವೃತ್ತಿಯ ಬಗ್ಗೆ ಹೇಳುವುದಾದರೆ 1947ರಿಂದ ಕೇಂದ್ರ ಸರಕಾರ 2154 ಅಂಚೆ ಚೀಟಿ ಹೊರತಂದರೆ ಅದರಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ್ದು ಕೇವಲ 30 ಮಾತ್ರ. ಭಾರತದ ಎಲ್ಲಾ ಉಪರಾಷ್ಟ್ರಪತಿಗಳ ಅಂಚೆ ಚೀಟಿ ಬಂದಿದೆ. ಆದರೆ ಕರ್ನಾಟಕವರಾದ ಬಿ. ಡಿ. ಜತ್ತಿಯವರ ಅಂಚೆ ಚೀಟಿ ಇಲ್ಲ. ತಮಿಳುನಾಡಿನ ಐದು ಮುಖ್ಯ ಮಂತ್ರಿಗಳ ಅಂಚೆ ಚೀಟಿ ಹೊರಬಂದರೆ ಕರ್ನಾಟಕದ ಎಸ್. ನಿಜಲಿಂಗಪ್ಪನವರು ಮಾತ್ರ ಈ ಗೌರವಕ್ಕೆ ಪಾತ್ರರು. ಒಟ್ಟು 35 ನಾಣ್ಯಗಳಲ್ಲಿ ಬಸವೇಶ್ವರರಿಗೆ ಮಾತ್ರ ಈ ಸ್ಥಾನ ಸಿಕ್ಕಿದೆ. ಎಲ್ಲ ರಾಜ್ಯಗಳ ಕುರಿತು ನ್ಯಾಶನಲ್ ಬುಕ್ ಟ್ರಸ್ಟ್ ಪುಸ್ತಕ ಪ್ರಕಟಿಸಿದೆ. ಕರ್ನಾಟಕಕ್ಕೆ ಇಲ್ಲಿ ಸ್ಥಾನವಿಲ್ಲ. ಭಾರತದ ದುರ್ಗ (ಕೋಟೆ)ಗಳ ಬಗ್ಗೆ ಅಂಚೆ ಚೀಟಿಮಾಲೆಯಲ್ಲಿ ಕರ್ನಾಟಕಕ್ಕೆ ಸ್ಥಾನವಿಲ್ಲ. ಭಾರತದ 12 ವಿ.ವಿ. ಗಳಿಗೆ ಅಂಚೆ ಚೀಟಿ ಗೌರವ ಸಂದರೆ, ಭಾರತದ ದೇಶೀಯ ಸಂಸ್ಥಾನದ ಮೊದಲಿನ ಮೈಸೂರು ವಿ.ವಿ.ಯ ಬಗ್ಗೆ ಕೇಂದ್ರಕ್ಕೆ ನೆನಪು ಬರಲೇ ಇಲ್ಲ. ಇನ್ನು ರೈಲ್ವೆ ಇಲಾಖೆಯ ಸವಲತ್ತು, ಉದ್ಯೋಗ ಮೊದಲಾದವುಗಳಿಂದ ಕನ್ನಡಿಗರು ವಂಚಿತರಾದ ಬಗ್ಗೆ ಸಾಕಷ್ಟು ತಿಳಿದಿದ್ದೇವೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನದ ಬಗ್ಗೆ ಸರಕಾರ ಮೌನಧೋರಣೆ ಅನುಸರಿಸಿದೆ.

ಇದೆಲ್ಲ ನಾವು ತಿಳಿಯಬೇಕಾದ ಸತ್ಯ ವಿಚಾರ. ಕೇಂದ್ರ ಸರಕಾರದಲ್ಲಿ ಕ್ಯಾಬಿನೆಟ್ ದರ್ಜೆಯ 27 ಸಚಿವರಿದ್ದರೂ ಕರ್ನಾಟಕಕ್ಕೆ ಈ ಭಾಗ್ಯವಿಲ್ಲ. 28 ಮಂದಿ ಕರ್ನಾಟಕದಿಂದ ಲೋಕಸಭಾ ಸದಸ್ಯರಿದ್ದರೂ ಕನ್ನಡದವರ ಧ್ವನಿ ಎತ್ತಲು ಯಾರಿಗೂ ಸಾಧ್ಯವಿಲ್ಲ. ಇಷ್ಟೆಲ್ಲ ಅಂಕಿ ಅಂಶಗಳಂತೆ ಕರ್ನಾಟಕದ ಕನ್ನಡಿಗನಿಗೆ ಅನ್ಯಾಯವಾದರೂ ಸರಿಪಡಿಸಲು ಇಂದಿಗೂ ಸಾಧ್ಯವಿಲ್ಲ. ಈ ಬಾರಿ ರಸಗೊಬ್ಬರ ಪೂರೈಕೆಯೂ ಲೋಪವಾಗಿ ರಾಜ್ಯದ ರೈತರಸ್ಥಿತಿ ಹದಗೆಟ್ಟಿತು.

ಈ ಬಗ್ಗೆ ಕನ್ನಡಿಗರಾದ ನಾವು ಎಚ್ಚೆತ್ತುಕೊಳ್ಳಬೇಕು. ಪ್ರತಿಯೊಂದು ವಿಚಾರದಲ್ಲಿಯೂ ಪ್ರತಿಯೊಬ್ಬ ಕನ್ನಡಿಗ ಧ್ವನಿ ತೆಗೆಯಲು ಪ್ರಾರಂಭಿಸಬೇಕು. ಹೀಗಾದಲ್ಲಿ ನಮ್ಮ ನಾಯಕರು ಎಚ್ಚೆತ್ತುಕೊಂಡು ಕರ್ನಾಟಕಕ್ಕೆ, ಕನ್ನಡಕ್ಕೆ, ಕನ್ನಡಿಗರಿಗೆ ನಿಜವಾದ ನ್ಯಾಯ ದೊರಕಲು ಸಾಧ್ಯ. ಆ ಮೂಲಕ ಕನ್ನಡಿಗರ ಕನ್ನಡಾಭಿಮಾನ ಬೆಳಕಿಗೆ ಬರಲಿ ಎಂದು ಹಾರೈಕೆ.

(ಈ ಮೇಲಿನ ಅಂಕಿಅಂಶಗಳು ಉಡುಪಿಯಲ್ಲಿ ನಡೆಸಿದ 74ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕರ ಭಾಷಣದಿಂದ ಸಂಗ್ರಹಿಸಲ್ಪಟ್ಟಿದೆ.

# ಭಾರತ ಭಾಗವತಗಳಲ್ಲಿ ಧೃತರಾಷ್ಟ್ರಾದಿಗಳ ಕೊನೆಯ ದಿನಗಳು

**-ಆತ್ಮಾರಾಮ ಶಾಸ್ತ್ರೀ, ಬೆಂಗಳೂರು.**

ಬ್ರಹ್ಮನ ಮುಖದಿಂದಲೇ ನಾಲ್ಕು ವೇದಗಳು ಪ್ರಕಟಗೊಂಡವು. ಆದರೆ ಅವುಗಳು ಒಂದೇ ರಾಶಿಯಾಗಿದ್ದವು. ಸಾಮಾನ್ಯ ಜನರಿಗೆ ಅವುಗಳನ್ನು ಋಕ್, ಯಜುಸ್, ಸಾಮ, ಅಥರ್ವ ಎಂದು ಗುರುತಿಸಿ ವಿಭಜಿಸಲಾಗುತ್ತಿರಲಿಲ್ಲ. ಆಗ ಕೃಷ್ಣದ್ವೈಪಾಯನರು ಅವುಗಳನ್ನು ವ್ಯಾಸ (ವಿಂಗಡಣೆ) ಮಾಡಿ ವೇದವ್ಯಾಸರೆನಿಸಿದರು. ಋಗ್ವೇದವನ್ನು ಪೈಲನಿಗೂ, ಯಜುರ್ವೇದವನ್ನು ವೈಶಂಪಾಯನನಿಗೂ, ಸಾಮವೇದವನ್ನು ಜೈಮಿನಿಗೂ, ಅಥರ್ವವೇದವನ್ನು ಸುಮಂತುವಿಗೂ ಉಪದೇಶಿಸಿದರು. ಆದರೂ ವೇದಗಳ ಅರ್ಥಗಳನ್ನು ಸಾಮಾನ್ಯಜನರು ತಿಳಿಯಲು ಅಸಮರ್ಥರಾದುದರಿಂದ ಭಾರತವೆಂಬ ಇತಿಹಾಸವನ್ನೂ ಪುರಾಣಗಳನ್ನೂ ರಚಿಸಿ ಅವುಗಳ ಮೂಲಕ ವೇದಾರ್ಥಗಳು ಸರ್ವಗ್ರಾಹ್ಯವಾಗುವಂತೆ ಮಾಡಿದರು.

ಮಹಾಪುರಾಣಗಳು ಹದಿನೆಂಟು ಮತ್ತು ಉಪಪುರಾಣಗಳು ಹದಿನೆಂಟು ಇವುಗಳನ್ನೆಲ್ಲಾ ವ್ಯಾಸಮಹರ್ಷಿಗಳೇ ರಚಿಸಿದರೆಂಬ ನಂಬಿಕೆಯಿದೆ. ಆದರೆ ಭಾರತದ ಆದಿಪರ್ವದಲ್ಲೇ ಪುರಾಣಗಳು ವಿವಿಧ ಋಷಿಗಳಿಂದ ಪ್ರಣೀತವಾದವೆಂದಿದೆ. ಹೀಗೆ ಭಿನ್ನಕರ್ತೃಕಗಳಾದುದರಿಂದಲೇ ಪುರಾಣ ಕಥೆಗಳಲ್ಲಿ ಪರಸ್ಪರ ವೈರುದ್ಯಗಳು ಕಾಣಿಸುತ್ತವೆ.

ಪುರಾಣಗಳಲ್ಲಿ ಭಾಗವತವೂ ಒಂದು. ಇದು ಶ್ರೀ ಭಾಗವತ ಮತ್ತು ದೇವಿ ಭಾಗವತವೆಂದು ಎರಡು ವಿಧ. ಆದರೆ ಇವುಗಳ ಬಗೆಗೆ ವಿದ್ವಾಂಸರಲ್ಲಿ ಐಕ್ಯಮತ್ಯವಿಲ್ಲ. ಕೆಲವರು ಶ್ರೀ ಭಾಗವತವೇ ಮುಖ್ಯ ಪುರಾಣವೆಂದೂ, ಕೆಲವರು ದೇವಿ ಭಾಗವತವೇ ನಿಜವಾದ ಪುರಾಣವೆಂದೂ, ಶ್ರೀ ಭಾಗವತವು ವಿಷ್ಣು ಪುರಾಣವನ್ನು ಆಧರಿಸಿ ಬರೆದ ಅರ್ವಾಚೀನ ಗ್ರಂಥವೆಂದೂ ವಾದಿಸುತ್ತಾರೆ. ಇರಲಿ.

ಶ್ರೀ ಭಾಗವತವೇ ಶ್ರೀ ಹರಿಯ ಅವತಾರ ಲೀಲೆಗಳನ್ನು ವರ್ಣಿಸುವ ಪುರಾಣ. ಇದರಲ್ಲಿ ಕೃಷ್ಣಾವತಾರವೂ ಬರುವುದರಿಂದ ಮಹಾಭಾರತದ ಕಥೆಯೂ ತಳಕು ಹಾಕಿಕೊಂಡಿದೆ.

ಭಾಗವತವನ್ನು ರಚಿಸಿ ವ್ಯಾಸರು ತಮ್ಮ ಪುತ್ರ ಶುಕಮುನಿಗಳಿಗೆ ವರ್ಣಿಸಿದಂತೆ ಅವರು ಪ್ರಾಯೋಪವೇಶದ ಪ್ರತದಲ್ಲಿದ್ದ (ಅಭಿಮನ್ಯುವಿನ ಮಗ) ಪರೀಕ್ಷಿತನಿಗೆ ಹೇಳುತ್ತಾರೆ. ಮತ್ತೆ ವ್ಯಾಸರೇ ರಚಿಸಿದ ಮಹಾಭಾರತವನ್ನು ವೈಶಂಪಾಯನರು ಪರೀಕ್ಷಿತನ ಮಗನಾದ ಜನಮೇಜಯನಿಗೆ ಹೇಳುತ್ತಾರೆ.

ಮಹಾಭಾರತದಲ್ಲಿ ಬರುವ ಧೃತರಾಷ್ಟ್ರಾದಿಗಳ ಕೊನೆಯ ದಿನಗಳ ವರ್ಣನೆಗೂ, ಭಾಗವತದಲ್ಲಿ ಬರುವ ವರ್ಣನೆಗೂ ಅಜಗಜಾಂತರವಿದೆ. ಈ ಎರಡು ಕೃತಿಗಳ ಕರ್ತೃ ಒಬ್ಬನೇ ಆಗಿದ್ದರೆ ಇಂತಹ ವ್ಯತ್ಯಾಸವುಂಟಾಗಲು ಕಾರಣವೇನು? ಒಬ್ಬನೇ ಒಂದು ಕಥೆಯನ್ನು, ಅದರಲ್ಲೂ ಐತಿಹಾಸಿಕ ಕಥೆಯನ್ನು ವಿಭಿನ್ನವಾಗಿ ಹೇಳಬಲ್ಲನೇ? ಇದು ವಿಚಾರಾರ್ಹವಾಗಿದೆ.

ದೇವಿ ಭಾಗವತದ ಶುಕ ಮಹರ್ಷಿಗಳು ಗೃಹಸ್ಥರಾಗಿ ಮಕ್ಕಳನ್ನು ಪಡೆಯುತ್ತಾರೆ. ಆದರೆ ಭಾರತದ ಮತ್ತು ಭಾಗವತದ ಶುಕಮುನಿಗಳು ಬ್ರಹ್ಮಿಷ್ಠ ಅವಧೂತರಾಗಿರುತ್ತಾರೆ. ಇವೆರಡು ಕಥೆಗಳ ಸಮನ್ವಯ ಸಾಧ್ಯವೇ?

ಮಹಾಭಾರತದ ಧೃತರಾಷ್ಟ್ರಾದಿಗಳ ಕೊನೆಯ ದಿನಗಳು ಹೀಗಿವೆ. :

ಯುಧಿಷ್ಠಿರನು ರಾಜ್ಯಾಭಿಷಿಕ್ತನಾಗಿ ಅಶ್ವಮೇಧಯಾಗವನ್ನು ನೆರವೇರಿಸಿದನು. ತಮ್ಮಂದಿರೊಡಗೂಡಿ ಧರ್ಮರಾಜ್ಯವನ್ನು ಸ್ಥಾಪಿಸಿದನು. ಬಹಳ ಕಾಲ ಕಳೆಯಲು ಧೃತರಾಷ್ಟ್ರನಿಗೆ ತೀವ್ರ ವೈರಾಗ್ಯವುಂಟಾಯಿತು. ಧರ್ಮರಾಜನನ್ನು ಕರೆದು ತಾನು ಸನ್ಯಾಸವನ್ನು ಸ್ವೀಕರಿಸಿ ಕಾಡಿಗೆಹೋಗಿ ಭಗವಚ್ಚಿಂತನೆಯಲ್ಲಿ ನಿರತನಾಗುವುದಾಗಿ ತಿಳಿಸಿದನು. ಧರ್ಮರಾಯನು ಅವನನ್ನು ತಡೆಯಲು ಪ್ರಯತ್ನಿಸಿದನು. ಆದರೆ ಧೃತರಾಷ್ಟ್ರನ ನಿಶ್ಚಯ ದೃಢವಾಗಿದ್ದುದರಿಂದ ಅವನು ವಿಚಲಿತನಾಗಲಿಲ್ಲ. ಕೊನೆಗೆ ಯುಧಿಷ್ಠಿರನ ಸಮ್ಮತಿ ಪಡೆದು ತನ್ನ ಅಗಲಿದ ಬಂಧುಗಳಿಗೆ, ತನಗೆ, ಗಾಂಧಾರಿಗೆ ಶ್ರಾದ್ಧಗಳನ್ನು ನೆರವೇರಿಸಿ ವನಕ್ಕೆ ಪ್ರಯಾಣಿಸಿದನು. ಗಾಂಧಾರಿಯೊಂದಿಗೆ ಹೊರಟ ಅವನನ್ನು ಕುಂತಿ, ವಿದುರ, ಸಂಜಯರೂ ಹಿಂಬಾಲಿಸಿದರು. ಅವರು ಆಶ್ರಮದಲ್ಲಿ ಧ್ಯಾನಯೋಗ ನಿರತರಾಗಿ ಅಂತ್ಯ ಸಮಯವನ್ನು ನಿರೀಕ್ಷಿಸುತ್ತಾ ಇದ್ದರು, ಇವರಲ್ಲಿ ವಿದುರನು ಮಾತ್ರ ಅವಧೂತನಾಗಿ, ದಿಗಂಬರನಾಗಿ, ಅನಿಕೇತನನಾಗಿ ತಿರುಗಾಡುತ್ತಿದ್ದನು. ಇದರ ಮಧ್ಯದಲ್ಲಿ ಯುಧಿಷ್ಠಿರಾದಿಗಳು ಹಿರಿಯರ ದರ್ಶನಾಕಾಂಕ್ಷಿಗಳಾಗಿ ಕಾಡಿಗೆ ತೆರಳಿ ಅವರ ಯೋಗಕ್ಷೇಮಗಳನ್ನು ವಿಚಾರಿಸಿದರು. ವಿರಾಗಿಗಳಾಗಿದ್ದರೂ ಆ ಹಿರಿಯರು ಪಾಂಡವರನ್ನು ವಾತ್ಸಲ್ಯದಿಂದ ಬರಮಾಡಿಕೊಂಡು ಉಪಚರಿಸಿದರು. ಆದರೆ ಆಕಸ್ಮಾತ್ತಾಗಿ ಅಲ್ಲಿಗೆ ಬಂದ ವಿದುರನು ಇವರನ್ನೆಲ್ಲ ನೋಡಿ ಹಿಂದಕ್ಕೆ ಓಡಿದನು. ಧರ್ಮರಾಜನು ಅವನನ್ನು ಕರೆಯುತ್ತಾ ಹಿಂದಿನಿಂದ ಓಡಿದನು. ವಿದುರನು ಒಂದು ಕಡೆ ಸ್ಥಿರವಾಗಿ ಧರ್ಮತನಯನನ್ನು ನೋಡುತ್ತಾ ನಿಂತನು. ಅವನ ಆತ್ಮವು ಯುಧಿಷ್ಠಿರನೊಳಗೆ ಪ್ರವೇಶಿಸಿತು. (ವಿದುರನು ಆಣಿಮಾಂಡವ್ಯನ ಶಾಪದಿಂದ ಮನುಷ್ಯನಾಗಿ ಹುಟ್ಟಿದ ಯಮನೇ ಆದುದರಿಂದ ತನ್ನ ಮಗನಾದ ಯುಧಿಷ್ಠಿರನಲ್ಲಿ ಐಕ್ಯವಾದದ್ದು ಸಹಜವೇ.) ವಿದುರನ ಶವ ಕೆಳಗುರುಳಿತು. ಧರ್ಮರಾಯನು ಅವನ ಸಂಸ್ಕಾರ ನೆರವೇರಿಸಲು ಮುಂದಾದಾಗ ಆಕಾಶವಾಣಿಯೊಂದು ಅವನನ್ನು ತಡೆದು ಆ ಮಹಾಯೋಗಿಗೆ ಸಂಸ್ಕಾರದ ಅವಶ್ಯಕತೆಯಿಲ್ಲವೆಂದಿತು. ಧರ್ಮರಾಜನು ಆಶ್ರಮಕ್ಕೆ ಹಿಂದಿರುಗಿ ವಿದುರನ ಅಂತ್ಯವನ್ನು ಅರುಹಿದನು. ಎಲ್ಲರೂ ಶೋಕಿಸಿದರು.

ಪಾಂಡವರು ಹಿಂದಿರುಗಿದ ಮೇಲೆ ಎರಡು ವರ್ಷಗಳು ಕಳೆದವು. ಧರ್ಮರಾಜನಲ್ಲಿಗೆ ಬಂದ ನಾರದರು ಧೃತರಾಷ್ಟ್ರಾದಿಗಳು ಪಾಂಡವರನ್ನು ಕೊನೆಯದಾಗಿ ನೋಡಲು ಹಂಬಲಿಸುತ್ತಿರುವುದಾಗಿ ತಿಳಿಸಿದರು. ಪಾಂಡವರು ಮತ್ತೆ ಅರಣ್ಯಕ್ಕೆ ತೆರಳಿ ಹಿರಿಯರನ್ನು ಕಂಡು ತಮ್ಮ ಮತ್ತು ಅವರ ಆಸೆಯನ್ನು ಪೂರೈಸಿದರು. ಅವರೆಲ್ಲ ಹಿಂದಕ್ಕೆ ತೆರಳಿದ ಮೇಲೆ ಧೃತರಾಷ್ಟ್ರಾದಿಗಳು ಗಂಗಾದ್ವಾರಕ್ಕೆ ಹೋಗಿ ಕಠಿನ ತಪಸ್ಸನ್ನಾಚರಿಸಿದರು. ಒಂದು ದಿನ ಅವರೆಲ್ಲ ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಭಯಂಕರ ಕಾಡ್ಗಿಚ್ಚು ಅವರನ್ನು ಆವರಿಸಿತು. ಸಂಜಯನ ಹೊರತಾಗಿ ಧೃತರಾಷ್ಟ್ರ, ಗಾಂಧಾರಿ, ಕುಂತಿಯರು ಕಾಡ್ಗಿಚ್ಚಿನಲ್ಲಿ ಬೆಂದು ಹೋದರು. ಸಂಜಯನು ಹೇಗೋ ಉಳಿದುಕೊಂಡನು.

ಈ ಸುದ್ದಿ ಹಸ್ತಿನಾವತಿಗೆ ತಲುಪಿತು. ಪಾಂಡವರು ಶೋಕತಪ್ತರಾಗಿ ಉತ್ತರಕ್ರಿಯೆಗಳನ್ನು ನೆರವೇರಿಸಿದರು.

ಇತ್ತ ಯಾದವರು ಋಷಿ ಶಾಪಕ್ಕೆ ಒಳಗಾಗಿ ಪರಸ್ಪರ ಹೊಡೆದಾಡಿಕೊಂಡು ನಾಶವಾದರು. ಕೃಷ್ಣ ಬಲರಾಮರೂ ತಮ್ಮ ಅವತಾರವನ್ನು ಉಪಸಂಹರಿಸಿಕೊಂಡರು. ಅರ್ಜುನನು ದ್ವಾರಕೆಗೆ ಹೋಗಿ ಇದೆಲ್ಲವನ್ನು ತಿಳಿದುಕೊಂಡು ಹಿಂದಕ್ಕೆ ಬಂದನು. ಯುಧಿಷ್ಠಿರನು ವಾರ್ತೆಯನ್ನು ಕೇಳಿ ವಿರಕ್ತನಾದನು. ತಮ್ಮನಾದ (ಧೃತರಾಷ್ಟ್ರನ ಮಗ) ಯುಯುತ್ಸುವಿಗೆ ಮತ್ತು ಮೊಮ್ಮಗನಾದ ಪರೀಕ್ಷಿತನಿಗೆ ಪಟ್ಟಕಟ್ಟಿ ಮಹಾಪ್ರಸ್ಥಾನವನ್ನು ಕೈಗೊಂಡನು. ದ್ರೌಪದಿ, ಭೀಮ, ಅರ್ಜುನ, ನಕುಲ, ಸಹದೇವರೂ ಅವನನ್ನು ಅನುಸರಿಸಿಹೋದರು. ದಾರಿಯಲ್ಲಿ ದ್ರೌಪದಿ, ಅರ್ಜುನ, ನಕುಲ, ಸಹದೇವ, ಭೀಮರು ಒಬ್ಬೊಬ್ಬರಾಗಿ ಬಿದ್ದು ಸತ್ತು ಹೋದರು. ಧರ್ಮರಾಯನೂ, ಅವನನ್ನು ಹಿಂಬಾಲಿಸಿದ ಒಂದು

(6ನೇ ಪುಟಕ್ಕೆ ...)

## ಹೊಸ ಬೆಳಕು

**ನಲ್ನುಡಿ :**

***ಪ್ರಸ್ತಾವ ಸದೃಶಂ ವಾಕ್ಯಂ ಸ್ವಭಾವ ಸದೃಶೀಂ ಕ್ರಿಯಾಂ।***
***ಆತ್ಮಶಕ್ತಿ ಸಮಂ ಕೋಪಂ ಯೋಜಾನಾತಿ ಸಪಂಡಿತಃ ॥***

ಅಂದರೆ ಪ್ರಕೃತೋಚಿತವಾದ ಮಾತನ್ನೂ ತನ್ನ ಸ್ವಭಾವಕ್ಕೆ ಸರಿಯಾದ ಕೆಲಸವನ್ನೂ ತನ್ನ ಶಕ್ತಿಗೆ ತಕ್ಕ ಕೋಪವನ್ನೂ ಯಾವನು ತಿಳಿದು ಮಾಡುತ್ತಾನೆಯೋ ಅವನೇ ಪಂಡಿತನು.

**ಪುಸಕ ಪರಿಚಯ :**
**ಯಕ್ಷಗಾನ ಸ್ವಬೋಧಿನಿ-**

**ಮೂಲಗ್ರಂಥಕರ್ತರು**-ದಿ। ಭಾಗವತ ನೀಲಾವರ ರಾಮಕೃಷ್ಣಯ್ಯ ಯಕ್ಷಗಾನ ಸ್ವಬೋಧಿನಿ ಯಕ್ಷಗಾನ ಪಠ್ಯ ಪುಸ್ತಕವನ್ನು ರಚಿಸಿದವರು ಪ್ರಸಿದ್ಧ ಭಾಗವತ ದಿ। ನೀಲಾವರ ರಾಮಕೃಷ್ಣಯ್ಯನವರು. ತಮ್ಮ ಸಹೋದರ ದಿ। ಗುರು ನೀಲಾವರ ರಾಮಕೃಷ್ಣಯ್ಯನವರು ಸಿದ್ದಪಡಿಸಿ ಈ ಹಿಂದೆ ಪ್ರಕಟಿಸಿದ್ದ ಕೃತಿಯನ್ನು ಪರಿಷ್ಕರಿಸಿ ಕೊಟ್ಟವರು ರಾಜ್ಯ ಪ್ರಶಸ್ತಿ ಪುರಸ್ಕೃತ ಗುರು ನೀಲಾವರ ಲಕ್ಷ್ಮೀನಾರಾಯಣಯ್ಯನವರು. ಜಾನಪದ ಅಕಾಡೆಮಿಯ ಜಾನಪದ ತಜ್ಞ ಪ್ರಶಸ್ತಿ ಪುರಸ್ಕೃತ ದಿ। ಗುರು ಗೋರ್ಪಾಡಿ ವಿಠಲ ಪಾಟೀಲರು ಪರಿಷ್ಕರಣೆಯಲ್ಲಿ ನೆರವು ನೀಡಿದ್ದಾರೆ. ಈ ಕೃತಿ ಯಕ್ಷಗಾನ ಕೇಂದ್ರ ಎಂ.ಜಿ.ಎಂ, ಕಾಲೇಜು ಉಡುಪಿ ಇದರ ವತಿಯಿಂದ ಪ್ರಕಟವಾಗಿದೆ.

ಕೆ. ಎಂ.ರಾಘವ ನಂಬಿಯಾರ್ ಈ ಕೃತಿಯಲ್ಲಿ ತಿಳಿಸಿದಂತೆ-''ಭಾಗವತ ನೀಲಾವರ ರಾಮಕೃಷ್ಣಯ್ಯ ಅವರದು ಯಕ್ಷಗಾನ ರಂಗದ ಚರಿತ್ರೆಯಲ್ಲಿ ಸ್ಥಿರವಾಗಿ ನಿಲ್ಲಬೇಕಾದಂತಹ ಹೆಸರಂತು ಹೌದು. ಮದ್ದಳೆಗಾರನಾಗಿ, ಭಾಗವತನಾಗಿ ಮುಂದೆ ಗಾನದ ಗುರುವಾಗಿ ನೀಲಾವರರು ಈ ರಂಗದಲ್ಲಿ ಬಹಳಷ್ಟನ್ನು ಸಾಧಿಸಿದ್ದಾರೆ, ತಾವು ಪಡೆದುಕೊಂಡುದಕ್ಕಿಂತ ಹೆಚ್ಚಿನದನ್ನು ಕೊಟ್ಟು ಸಮಾಜವನ್ನು ಋಣಕ್ಕೆ ಸಿಲುಕಿಸಿ ತೆರಳಿದ ಮಹಾನುಭಾವರಲ್ಲಿ ಅವರೊಬ್ಬರು''.

ನೀಲಾವರ ಲಕ್ಷ್ಮೀನಾರಾಯಣಯ್ಯನವರು ಈ ಪುಸ್ತಕದಲ್ಲಿ ಹೇಳಿದಂತೆ ''ಮಾತುಗಾರಿಕೆ ಸ್ವಯಂ ಮನೋಧರ್ಮದಿಂದಲೇ ಬರತಕ್ಕದ್ದಲ್ಲದೆ ಬರೆದು ಕಲಿಯುವುದಲ್ಲ. ಉಳಿದ ತಾಳ, ಬಿಡ್ತಿಗೆ, ಮುಕ್ತಾಯ, ಒಂದೇ ತಾಳದಲ್ಲಿ ವಿವಿಧ ಮಟ್ಟುಗಳು, ಪದ್ಯಗಳಲ್ಲಿನ ನಡೆ ಬದಲಾವಣೆ, ನೃತ್ಯದ ವೈವಿಧ್ಯ, ಎಲ್ಲಾ ಪ್ರಕಾರದ ಒಡ್ಡೋಲಗಗಳು, ಇಡೀ ಸಭಾ ಲಕ್ಷಣ, ಪೀಠಿಕೆ ಬಿಡ್ತಿಗೆಗಳು, ಪೀಠಿಕೆ ಸ್ತ್ರೀವೇಷ ಕುಣಿತ ಇವೆಲ್ಲವನ್ನೂ ತತ್ಕಾರ ಸಹಿತ ಕಲಿಯುವವರಿಗೆ ಸಹಕಾರಿಯಾಗುವಂತೆ ಇಲ್ಲಿ ವಿವರವಾಗಿ ಬರೆದಿದ್ದಾರೆ''.

ಈ ಕೃತಿಯಲ್ಲಿ 8 ಅಧ್ಯಾಯಗಳಿವೆ. ನಾಟ್ಯತಾಳ, ಒಂದೇ ತಾಳದಲ್ಲಿ ವಿವಿಧ ಮಟ್ಟುಗಳು, ತಾಳ ಮಾಲಿಕೆ ಮತ್ತು ನೃತ್ಯದಲ್ಲಿ ವೈವಿಧ್ಯತೆ, ವಿವಿಧ ಕುಣಿತ ಪದತಿ, ಸಭಾಲಕ್ಷಣ, ಪ್ರಸಂಗ ಪೀಠಿಕೆ, ತಾಳ ಮುಕ್ತಾಯಗಳು, ಮತ್ತು ಬಣ್ಣಗಾರಿಕೆ- ವೇಷ ಭೂಷಣಗಳು, ನೀಲಾವರ ಲಕ್ಷ್ಮೀನಾರಾಯಣ ರಾವ್ ಅವರು ಸಂಗ್ರಹಿಸಿದ ಆನೇಗುಡ್ಡೆ ವಿನಾಯಕ ದೇವರ ಸ್ತುತಿ, ಜಾನಪದ ಹಾಡು-ರಾಮಾಯಣ, ಕೋಲಾಟದ ಪದ-ಹೂವಿನ ಕೋಲು ಪದಗಳು, ಜಲಕ್ರೀಡೆ ಪದ್ಯಗಳು ಈ ಕೃತಿಯಲ್ಲಿವೆ. ಮಾದರಿಗಾಗಿ ಪ್ರತಿ ತಾಳದಲ್ಲಿ ಪದ್ಯಗಳನ್ನು ಬಿಡ್ತಿಗೆ, ಮುಕ್ತಾಯ ಸಹಿತ ಕೃತಿಯಲ್ಲಿ ಕಾಣಿಸಲಾಗಿದೆ. ಉದಾಹರಣೆಗಾಗಿ:

**ರಾಗ-ಮಧ್ಯಮಾವತಿ-ಏಕತಾಳ**

ದೇವ•ನೀ । ಚಿತ್ರೈಸು ದಿಂದತ್ತೈ ।
ಬಿಡ್ತಿಗೆ : ದಿತ್ತಾತ್ತೋದಿನ್ನತಾಕಡ್ । ದಿತ್ತಾತ್ತೈಯತ್ತದಿನ್ನ ।
ದೇವ•ನೀ । ಚಿತ್ರೈ•ಸಿ ।
ದೇನ•ಯ್ಯ । ನಿನ್ನ•• ॥
ಸೇವ•ಕ । ಮೇರ್ಲ್ಯಾ•• ತೆ ।
ಪೂರ್ಣ•ಕಾ । ರುಣ್ಯ ದಿಂದತ್ತೈ ॥
ಮುಕ್ತಾಯ :ದಿತ್ತಾತ್ತೋದಿನ್ನತಾಕಡ್ । ದಿತ್ತಾತ್ತೈಯತ್ತದಿನ್ನ ದಿಂ ।

**- ವೈ. ಮೋಹನರಾವ್**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ